ನಿಮಗೆ ನಿದ್ದೆ ಮಾಡೋದಿಕ್ಕೆ ಸಮಯ ಸಂದರ್ಭ ಒಂದು ಇಲ್ವಾ?"

ಮೇಸ್ತ್ರಿಗೆ ತನ್ನ ತಪ್ಪಿನ ಅರಿವಾಗಿ, "ಮುನಿಸು ತರವೇ ಮುಗುದೆ" ಎಂದು ಹಿತವಾಗಿ ಹಾಡಿದರು. ಟೀಚರು ಸಿಡುಕಿದರು. "ಯಾವ ನರ್ಸಮ್ಮನನ್ನು ನೋಡಿ ಈ ಹಾಡು ಹೊರಬಂತು?"

ಲೇಬರ್ ವಾರ್ಡಿನ ಬಾಗಿಲು ತೆರೆಯಿತು. ನರ್ಸೊಬ್ಬಳು ಗಡಿಬಿಡಿಯಿಂದ ಬಂದು "ಹೆಣ್ಣುಮಗು" ಎಂದಳು. ಸಿಮೆಂಟ್ ಬೆಂಚಲ್ಲಿ ಕುಳಿತಿದ್ದವರೆಲ್ಲಾ ಎದ್ದು ನಿಂತು, "ಯಾರಿಗೆ" ಎಂದು ಕೇಳಿದರು. "ಅಬ್ದುಲ್ ಸಾಹುಕಾರರಿಗೆ" ಮೇಸ್ತ್ರು ನಗುತ್ತಾ, "ಸಾಕ್ಷಾತ್ ಅಬ್ದುಲ್ ಸಾಹುಕಾರ್ರೇ ಹೆತ್ತು ಬಿಟ್ರಾ?" ಎಂದು ಪ್ರಶ್ನಿಸಿದಾಗ ನರ್ಸ್‌ಗೆ ತನ್ನ ತಪ್ಪಿನ ಅರಿವಾಗಿ, "ಅಬ್ದುಲ್ಲ್ ಸಾಹುಕಾರರ ಬೀಬಿಗೆ" ಎಂದು ಸರಿಪಡಿಸಿಕೊಂಡಳು. ಅಬ್ದುಲ್ಲ್ ಸಾಹುಕಾರ ಒಳ ನುಗ್ಗಲು ಯತ್ನಿಸಿದ. ಹ್ಞಾಂ ಹ್ಞಾಂ ಒಂದು ಗಂಟೆ ಆದ ಮೇಲೇನೇ ಮುಖದರ್ಶನ! ನರ್ಸು ಬಾಗಿಲೆಳೆದುಕೊಂಡು ಒಳನಡೆದಳು.

ಮೇಸ್ತ್ರು ಮತ್ತೆ ಬೆಂಚಲ್ಲಿ ಕುಳಿತು ಟೀಚರತ್ತ ನೋಡಿದರು. ಟೀಚರು ಚಳಿಗೆ ಶಾಲು ಹೊದ್ದುಕೊಂಡಿದ್ದರು. ಅರವತ್ತು ದಾಟಿದರೂ ಅಲಂಕಾರ ಮಾಡಿಕೊಂಡ್ರೆ ನೋಡುವಂತಿದ್ದಾಳೆ. ತಾನೇ ಬೆರ್ಚಪ್ಪನಂತಿರುವುದು. ಕೂದಲು ಉದುರಿದೆ; ಹಲ್ಲು ಹೋಗಿದೆ; ರೆಟಿನಾ ನರದೌರ್ಬಲ್ಯದಿಂದ ದೃಷ್ಟಿ ಸರಿಯಾಗಿ ಕಾಣುತ್ತಿಲ್ಲ. ದಿನಾ ಹತ್ತು ಮಾತ್ರೆ ತಿಂದರೇನೇ ಜೀವ ಉಳಿಯೋದು. ಈಗ ಒಬ್ಬಳು ಮೊಮ್ಮಗಳು ಬೇಕು. ಅವಳು ತಾತ, ತಾತ ಎಂದು ಮುದ್ದಾಗಿ ಕರೆಯಬೇಕು. ವಾಕಿಂಗ್ ಸ್ಟಿಕ್ಕು ಕೈಗೆ ಕೊಟ್ಟು ವಾಕಿಂಗಿಗೆ ಎಳಕೊಂಡು ಹೋಗಬೇಕು. ತಾನು ಸಾಧ್ಯವಾದಷ್ಟು ಅವಳನ್ನು ಹೆಗಲ ಮೇಲೆ ಕೂರಿಸಿಕೊಂಡು ಹೋಗಬೇಕು. ಮಗಳು ಕ್ಷಿತಿಜಳನ್ನು ತಾನು ಹಾಗೆ ಚೆನ್ನಕೇಶವನ ರಥೋತ್ಸವಕ್ಕೆ ಕರ್ಕೊಂಡು ಹೋಗಬೇಕು. ತನಗೆ ಗೊತ್ತಿರುವ ಪಂಚತಂತ್ರದ, ರಾಮಾಯಣ–ಮಹಾಭಾರತದ ಎಲ್ಲಾ ಕತೆ ಹೇಳಬೇಕು. ನಾಯಿಮರಿ ನಾಯಿಮರಿ, ಬೆಕ್ಕೇ ಬೆಕ್ಕೇ, ಬಾಳೆಯ ತೋಟದ ಕಲಿಸಿಕೊಡಬೇಕು. ತನಗೆ ಗೊತ್ತಿರುವ ಎಲ್ಲಾ ಭಾವಗೀತೆಗಳನ್ನು, ಸಿನಿಮಾ ಗೀತೆ ತನಗೆ ಬರುವುದಿಲ್ಲ. ಅದನ್ನು ಅವಳೇ ಕಲಿತುಕೊಳ್ತಾಳೆ. ತಾನು ಹಾಡು ಹೇಳಿ ಅವಳೆದುರು ಕುಣಿಯಬೇಕು. ಆಗ ಮೊಮ್ಮಗಳು ಕಿಲಿ ಕಿಲಿ ನಗ್ತಾಳೆ. ಆಗ ಕೆನ್ನೆಯಲ್ಲಿ ಕಾಣಿಸಿಕೊಳ್ಳುವ ಕುಳಿಗೆ ಲೊಚಕ್ಕನೆ ಮುತ್ತಿಕ್ಕಬೇಕು.

ಟೀಚರ ಯೋಚನಾ ಸರಣಿ ಬೇರೆನೇ ಆಗಿತ್ತು. ಇವರು ಹೆಣ್ಣೇ ಬೇಕು ಅಂತಿದ್ದಾರೆ. ಮಗಳು ಕ್ಷಿತಿಜ ಕೂಡಾ ಹೆಣ್ಣನ್ನೇ ಅಪೇಕ್ಷಿಸುತ್ತಿದ್ದಾಳೆ. ಹೆಣ್ಣಾದರೆ ಒಬ್ಬಳನ್ನೇ ಎಲ್ಲಿಗಾದರೂ ಕಳಿಸಲು ಸಾಧ್ಯ ಉಂಟಾ? ಕಾಲೇಜಲ್ಲಿ ಎಷ್ಟು ತರುಣರು ಹಿಂದೆ ಬೀಳ್ತಾರೋ ಏನೋ? ಎಲ್ಲಾದರೂ ಒಂಟಿಯಾಗಿ ಕಿರಾತಕರ ಕೈಗೆ ಸಿಕ್ಕಿ ಬಿದ್ದರೆ ಈ ಪಾರಿವಾಳದ ಗತಿಯೇನು? ಮದುವೆ ಬೇಗ ಆಗದಿದ್ದರೆ ಅಕ್ಕಪಕ್ಕದವರ ಕುಹಕ ನೋಟ ಎದುರಿಸಬೇಕು. ಎಂಥಾ ಗಂಡ ಸಿಗ್ತಾನೊ? ಅವನೇ ಕ್ಷುಲ್ಲಕ ಕಾರಣಕ್ಕೆ ಕೊಂದು ನೇಣು ಹಾಕದಿದ್ದರೆ ಸಾಕು. ವರದಕ್ಷಿಣೆ ತಂದುಕೊಡೆಂದು ನಿತ್ಯ ಪೀಡಿಸದಿದ್ರೆ ಅದೇ ದೊಡ್ಡದು. ಈ ಉತ್ಪಾತಗಳಿಗೆ ಹೆಣ್ಣು ಬೇಕಾ?

ಮೇಸ್ತ್ರು ಹಗಲುಗನಸಲ್ಲಿ ತೇಲುತ್ತಿದ್ದರು. ಅವರು ಮಗಳು ಕ್ಷಿತಿಜಾಳಿಗಾಗಿ ತಂದುಕೊಟ್ಟ ಭರತನಾಟ್ಯದ ವೇಷಭೂಷಣಗಳಿದ್ದವು. ಆರ್ಟಿಫೀಶಿಯಲ್ ಆಭರಣಗಳ ಒಂದು ಪೆಟ್ಟಿಗೆಯೇ ಇತ್ತು. ಮಗಳು ಭರತನಾಟ್ಯ ಮತ್ತು ಸಂಗೀತ ವಿದುಷಿಯಾಗಬೇಕು. ಸಾಕ್ಷಾತ್ ಶಾರದಾ ದೇವಿಯಂತೆ ಸಾವಿರಾರು ಜನರೆದುರು ಕುಳಿತು ವೀಣೆ ನುಡಿಸಿ ಸಂಗೀತ ಹಾಡಬೇಕು. ಆಗ ಜನ ವಾಹ್, ಶಬ್ಬಾಸ್ ಎಂದು ನಾದ ಹೊರಡಿಸಬೇಕು. ತಾನು ಆಗ ಅಲೌಕಿಕ ಆಮೋದದಲ್ಲಿ ತೇಲಬೇಕು ಎಂದು ಕನಸುಕಂಡಿದ್ದರು. ಈಗಾದರೇನಂತೆ. ಭರತನಾಟ್ಯದ ವೇಷಭೂಷಣ ಸ್ವಲ್ಪ ಮಾಸಿರಬೇಕು. ಆದರೆ, ಸುಂದರವಾದ ಕಲಾತ್ಮಕ ವೀಣೆ ಹಾಗೆ ಇದೆ. ಮಗಳು ಕ್ಷಿತಿಜಾಳಿಂದ ಮಾಡಿಸಲಾಗದ್ದನ್ನು ಮೊಮ್ಮಗಳಿಂದ ಮಾಡಿಸಬೇಕು. ಅದೆಲ್ಲಾ ಸರಿ. ಆದರೆ ಮಗು ಗಂಡೋ, ಹೆಣ್ಣೋ?

ಒಂದು ವೇಳೆ ಗಂಡಾದರೆ ಏನಂತೆ? ಗುದಕ್ಕೆ ಸೂರ್ಯನ ಬಿಸಿಲು ಬೀಳುವವರೆಗೆ ಏಳುವುದಿಲ್ಲ. ಆ ಬಳಿಕ ಎದ್ದರೂ ಒಂದು ಮನೆಗೆಲಸ ಮಾಡುವುದಿಲ್ಲ. ಮ್ಯಾಟ್ರಿಕ್ ಓದುವಾಗಲೇ ಡ್ರಗ್ಸ್ ಜಾಲಕ್ಕೆ ಸಿಕ್ಕಿಬೀಳುತ್ತಾನೆ. ಆಮೇಲೆ ಯಾವುದೋ ಪಾರ್ಟಿಯ ಪ್ರಚಾರಕನಾಗುತ್ತಾನೆ ಹೊಡೆದಾಟ–ಬಡಿದಾಟಕ್ಕೆ ಹೋಗುತ್ತಾನೆ. ಗುಂಪು ಘರ್ಷಣೆಯೋ, ಕೋಮು ಗಲಭೆಯೋ, ಭೂಗತ ಲೋಕದ ಪಾತಕವೋ ಯಾವುದರಲ್ಲಾದರೂ ಸಿಕ್ಕಿಬೀಳುತ್ತಾನೆ. ನಾಲ್ಕು ಕಾಸು ಸಿಕ್ಕಿದರೆ ಭಯೋತ್ಪಾದಕನೂ ಆಗಬಹುದು. ಈ ಭಾಗ್ಯಕ್ಕೆ ಗಂಡೇಕೆ ಬೇಕು?

ಮೇಸ್ತ್ರು ಮಾತು ಕೇಳಿ ಟೀಚರಿಗೆ ಸಿಟ್ಟು ಬಂತು. "ಹೌದು. ನೀವು ಹೀಗೆಲ್ಲಾ ಆಗಿದ್ರಾ? ನಮ್ಮ ಅಳಿಯಂದಿರು ದಾರಿ ತಪ್ಪಿದ್ರೆ? ನೀವ್ಯಾಕೆ ಹಾಗೆ ಅಂದುಕೊಳ್ಳಬೇಕು? ಇನ್ನು ಹೆಣ್ಣೇನು ಹಿಂದುಳಿದಿದ್ದಾಳೆಂದು ಭಾವಿಸಿದ್ದೀರಾ? ರಾಜೀವ ಗಾಂಧೀನ ಕೊಂದದ್ದು ಯಾರು? ಚಂದನವನದಲ್ಲಿ ಡ್ರಗ್ಸ್ ಜಾಲದ ಮುಂಚೂಣಿಯಲ್ಲಿ ಇದ್ದವರು ಯಾರು? ಹನಿಟ್ರ್ಯಾಪ್ ಮಾಡುವವರು ಯಾರು? ಅಪರಾಧ ಕೃತ್ಯಗಳಿಗೂ ಲಿಂಗಕ್ಕೂ ಸಂಬಂಧವಿಲ್ಲ. ನಮ್ಮ ಮಕ್ಕಳು ದಾರಿ ತಪ್ಪದಂತೆ ಎಳವೆಯಲ್ಲೇ ಸರಿಯಾದ ಸಂಸ್ಕಾರ ಕೊಡಬೇಕಾದ್ದು ನಮ್ಮ ಹೊಣೆ." ಮೇಸ್ತ್ರಿಗೆ ರೇಗಿತು. "ನನಗೆ ಮೊಮ್ಮಗಳೇ ಬೇಕು. ಅವಳನ್ನು ಇಂದಿರಾ ಗಾಂಧಿ ಮಾಡ್ತೀನಿ. ಕಲ್ಪನಾ ಚಾವ್ಲ, ಸುನೀತಾ ವಿಲಿಯಂಸ್ ಮಾಡ್ತೀನಿ. ಸಾನಿಯಾ ಮಿರ್ಜಾ, ಪಿ.ವಿ. ಸಿಂಧು ಮಾಡ್ತೀನಿ. ಭಯೋತ್ಪಾದಕರ ವಿರುದ್ಧ ಹೋರಾಡಿದ ಪಾಕಿಸ್ತಾನದ ಮಲಾಲಾಳ ಹಾಗೆ ಬೆಳೆಸ್ತೀನಿ. ಅದೆಲ್ಲಾ ಬಿಡು. ದೇಶದ ಪ್ರಥಮ ಮಹಿಳಾ ಫೀಲ್ಡ್ ಮಾರ್ಷಲ್ ಮಾಡಿಸ್ತೀನಿ."

ಈಗ ಲೇಬರ್ ವಾರ್ಡ್ ಬಾಗಿಲು ತೆರೆದುಕೊಂಡಿತು. ಮಗಳು ಕ್ಷಿತಿಜಾಳ ಹೆರಿಗೆ ಆಗಿರ್ಬೇಕು. ಗಂಡೊ, ಹೆಣ್ಣೋ?

ಬಾಗಿಲು ತೆರೆದು ನರ್ಸು ಹೊರಬಂದಳು. ಅವಳೂ ಗಡಿಬಿಡಿಯಲ್ಲಿದ್ದಳು. "ಕೂಸಪ್ಪ ಗೌಡರು ಈ ಸಲ ಗಂಡು ಮಗು ಹೆತ್ತಿದ್ದಾರೆ" ಎಂದು ಬಿಟ್ಟಳು.

ಲೇಬರ್ ವಾರ್ಡಿನ ಎದುರು ಸೇರಿದ್ದ ಜನ ಗೊಳ್ಳೆಂದು ನಕ್ಕರು. "ಹಾಗಾದರೆ ಕೂಸಪ್ಪ ಗೌಡರು ಹಿಂದಿನ ಸಲ ಹೆಣ್ಣು ಹೆತ್ತಿದ್ದರೆ?"

ಮೇಸ್ತ್ರು ಪ್ರಶ್ನೆಗೆ ಗಲಿಬಿಲಿಗೊಂಡ ನರ್ಸು "ಹಾಗಲ್ಲ. ಆಗಿನ ಹೆರಿಗೆಯದ್ದು ಹೆಣ್ಣುಮಗು. ಈಗಿನ ಹೆರಿಗೆಯದ್ದು ಗಂಡುಮಗು." ಎಂದು ತನ್ನನ್ನು ತಾನು ತಿದ್ದಿಕೊಂಡಳು.

ಮೇಸ್ತ್ರು ನಿಯಂತ್ರಣ ಮೀರಿ ಆ ಮಾತು ಹೊರ ಹೊಮ್ಮಿತು. "ಮುಂದಿನ ಸರದಿ ಹೆಣ್ಣು ಮಗುವಿನದ್ದು. ಅದು ನನ್ನ ಮಗಳ ಮಗಳು."

"ಈಗ ಅಬ್ದುಲ್ಲ ಸಾಹುಕಾರ್ರು ತಮ್ಮ ಮಗಳನ್ನು ನೋಡಲು ಒಳಬರಬಹುದು."

"ಸಾಹುಕಾರ್ರೇ, ಮಗಳಿಗೆ ಮಲಾಲಾ ಎಂದು ಹೆಸರಿಡುವ ಕೃಪೆ ಮಾಡಿ. ನಮ್ಮ ದೇಶದಲ್ಲಿ ಒಬ್ಬಳು ಮಲಾಲಾ ಹುಟ್ಟಲಿ."

ಅಬ್ದುಲ್ಲ ಸಾಹುಕಾರ ಅವಸರವಸರದಿಂದ ಲೇಬರ್ ವಾರ್ಡಿನೊಳಗೆ ತೂರಿಕೊಂಡ.

ಟೀಚರಿಗೆ ಸಮಾಧಾನವಾಯಿತು. "ಸದ್ಯ ಅವನು ನಿಮ್ಮ ಅಧಿಕಪ್ರಸಂಗತನಕ್ಕೆ ಬಯ್ಯಲಿಲ್ಲ. ನಿಮಗ್ಯಾಕ್ರೀ ಬೇಕು ಅನ್ಯರ ಉಸಾಬರಿ. ಬೇಕಿದ್ರೆ ನಿಮ್ಮ ಮೊಮ್ಮಗಳಿಗೆ ಇಟ್ಕೊಳ್ಳಿ ಮಲಾಲ ಅಂತ."

"ಇಡ್ತೀನೇ. ಇಟ್ಟೇ ಇಡ್ತೀನಿ. ನಾನು ಮೊಮ್ಮಗಳಿಗೆ ಮಲಾಲಾ ಅಂತಾನೇ ಹೆಸರಿಡೋದು."

ಟೀಚರ್ ಈ ಹುಚ್ಚಿಗೆ ಏನೆಂದು ಹೇಳುವುದು? ಇಷ್ಟಕ್ಕೂ ನಮಗಾಗುವುದು ಗಂಡೋ? ಹೆಣ್ಣೋ? ಬಾಗಿಲು ಮತ್ತೆ ತೆರೆಯಿತು.

ಈ ಬಾರಿ ಸಾಕ್ಷತ್ ಡಾ. ರವಿಚಂದ್ರರೇ ನಗುತ್ತಾ ಕಾಣಿಸಿಕೊಂಡು, "ಮೇಸ್ತ್ರೇ, ನಿಮಗೆ ಮೊಮ್ಮಗಳು ಬೇಕು. ಟೀಚರಿಗೆ ಮೊಮ್ಮಗ ಬೇಕು. ದೇವರಿಗೆ ಕನ್‌ಫ್ಯೂಸು ಮಾಡಿ ಹಾಕಿ ಬಿಟ್ರಿ ನೀವು" ಎಂದರು.

"ಡಾಕ್ಟ್ರೇ, ಗಂಡೋ, ಹೆಣ್ಣೋ?"

"ದೇವರು ನಂಬಿದವರ ಕೈ ಬಿಡ್ತಾನೇನ್ರಿ. ನಿಮಗೆ ಟ್ವಿನ್ಸ್. ಒಂದು ಹೆಣ್ಣು, ಒಂದು ಗಂಡು."

ಪ್ರತಿಕ್ರಿಯಿಸಿ: feedback@sudha.co.in

